ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಪ್ರಾಯುಷ್ ಆದ್ದು. [ಸಂ. 1.

ಬೆಂಗಳೂರು, ಗುರುವಾರ, ಜನವರಿ ತಾ॥ 8, ಸ॥ 1903.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಟು, ರೆಜಿಸ್ಟ್ರೇರ್ಷ ವ ಯಡ್ಯುಕೇಷ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ಟು ವ ಸೆಷ್ಷ ಜಡ್ಜ್‌ರು, ಡಿಸ್ಟ್ರಿಕ್ಟ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸ್‌ಗಳು.

3ನೇ ಭಾಗ–ಲೆಜಿಸ್‌ಲೇಟಿವ್ ರೆಗ್ಯುಲೇಷ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದಪತ್ರಗಳು.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 19ನೇ ಡಿಸೆಂಬರ್ 1902.

ನಂ. 10173—ಲೋ. ಬೋ. (ಪಿ) 484, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಈಂಡ ಜಾತ್ರೆಗಳಿಗೂ ಮತ್ತು ಉತ್ಸವಗಳಿಗೂ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮುದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್ಟು.	ತಾರೀಖು.		ಅಧಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಶ್ರೀವೀರರಾಘವ ಸ್ವಾಮಿಯ ವಾಸಿ ಅಮಾವಾಸ್ಯೆ ಉತ್ಸವ.	ತಿರುವಳ್ಳೂರು	ತಿರುವಳ್ಳೂರು..	ಚಂಗಲ್ಪಟ್	20–2–1903	28–2–1903	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡ್ವರ್ಟೈಮೆಂಟ್ ನಂ. 2335—ಪಿ., ತಾ॥ $\frac{13}{16}$—12—1902.
ಮಹಾ ಶಿವರಾತ್ರಿ ಉತ್ಸವ.	ಶ್ರೀಶೈಲಂ ..	ನಂದಿಕೊಟ್ಕೂರ್.	ಕರ್ನೂಲು	18–2–1903	25–3–1903	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡ್ವರ್ಟೈಮೆಂಟ್ ನಂ. 2337—ಪಿ., ತಾ॥ 16—12—1902.

ತಾರೀಖು 19ನೇ ಡಿಸೆಂಬರ್ 1902.

ನಂ. 10174—ಲೋ. ಬೋ. (ಪ) 483, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನ್‌ಮೆಂಟಿನವರು ಆಜ್ಞೀಪಡಿಸುತ್ತಾರೆ :—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ಟಿಕೆಟ್ಟುಗಳು ವಿಕ್ರಯಿಸಲ್ಪಡಬೆ ಇರುವ ತಾರೀಖುಗಳು ಮತ್ತು ಸ್ಪೇಷ್ಗಳು.			ಆಧಾರಿಟಿ.
				ಯಾವ ಲಾಗಾಯತು	ಯಾವ ವರಿವಿಗೆ.	ಸ್ಪೇಷ್ಗಳು.	
ಶ್ರೀವಿರಾಷ್ಟನ ಸ್ವಾಮಿಯ ಮಾಸೆ ಉಮಾವಾಸ್ಯೆ ಜಾತ್ರೆ.	ತಿರುವಳ್ಳೂರು	ತಿರುವಳ್ಳೂರು	ಚಿಂಗಲ್ಪಟ್	20—2—03	28—2—03	ಮದರಾಸು ರೈಲ್ವೇಯಲ್ಲಿರುವ ತಿರುವಳ್ಳೂರು, ಪೆರಂಬದೂರು, ಅರಕ್ಕೋಣಂ ಮತ್ತು ಜೋಲಾರ್‌ಪೇಟೆ ಸ್ಟೇಷ್ಗಳಿಂದ ಪೆರಂಬದೂರು, ಅರಕ್ಕೋಣಂ, ಕಾಟ್ಪಾಡಿ, ಜೋಲಾರ್‌ಪೇಟೆ ಸ್ಟೇಷ್ಗಳಿಗೆ ಹೋಗಿ ಬರುವ ಜನಗಳಿಗೆ.	ಫ್ರೆಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ನೋಟಿಫಿಕೇಷನ್ ನಂ. 2335—ಸಿ, ತಾ॥ 13—12—02

ತಾರೀಖು 27ನೇ ಡಿಸೆಂಬರ್ 1902.

ನಂ. 10481—ಲೋ. ಬೋ. ಪಿ. 499, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇಷ್ಸ್ ಅನುಸರಿಸಿ 1898ನೇ ಫೆಬ್ರವರಿ 10ನೇ ಮಾರ್ಕಂ 9383—ಮಿ. ಫೈ. 21—96ನೇ ಮತ್ತು 9384—ಮಿ. ಫೈ. 21—96ನೇ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಸ್‌ಗಳ ಉದ್ದೇಶಗಳಿಗಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಚಿತ್ರದುರ್ಗದ ಟವನಿಗೆ ಸೇರಿದ ಕುಗ್ರಾಮವಾದ ಬುರ್ಗಿನಹಟ್ಟಿಯು ರೋಗತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 31ನೇ ಡಿಸೆಂಬರ್ 1902.

ನಂ. 10502—ಲೋ. ಬೋ. (ಪ) 504, ಸ್ಯ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ II ನೇ ನಂಬರ ರೆಗ್ಯುಲೇಷನಿನ 2ನೇ ಸೆಕ್ಷನಿಗೆ ಸೇರಿದ 1ನೇ ಸಬ್ ಸೆಕ್ಷನ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ಪ್ರತಿ ಒಂದರ ಎದುರಾಗಿ ನಮೂದಿಸಿರುವ ಆಯಾ ಸ್ಥಳಗಳಿಗೂ ಮತ್ತು ಆಯಾ ತಾರೀಖುಗಳಲ್ಲೂ ರೋಗ ತಗಲಿದ ಪ್ರದೇಶಗಳಿಂದ ಬರುವ ಜನಗಳನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮ್ಮ ಮಹಾರಾಜಾ ಸರ್ಕಾರದವರು ಆಜ್ಞೀಪಡಿಸುತ್ತಾರೆ :—

ಡಿಸ್ಟ್ರಿಕ್ಟ್.	ತಾಲ್ಲೂಕು.	ಜಾತ್ರೆ ಯಾ ಉತ್ಸವದ ಹೆಸರು.	ಜಾತ್ರೆ ಯಾ ಉತ್ಸವ ನಡೆಯತಕ್ಕ ಸ್ಥಳ.	ತಾರೀಖು.	
				ಯಾವ ಲಾಗಾಯತು.	ಯಾವವರಿವಿಗೆ.
ಮೈಸೂರು ...	ಟಿ. ನರಸೀಪುರ	ತ್ರಿಪುರಸುಂದರಮ್ಮನವರ ಜಾತ್ರೆ	ಮೂಗೂರು	12— 1—03	20— 1—03
	ಗುಂಡ್ಲುಪೇಟೆ	ವೆಂಕಟರಮಣಸ್ವಾಮಿ ಉತ್ಸವ	ವೆಂಕಟರಮಣಸ್ವಾಮಿ ಬೆಟ್ಟ	13— 1—03	
	ಶ್ರೀರಂಗಪಟ್ಟಣ	ಸಂಕ್ರಾಂತಿ ಉತ್ಸವ	ಶ್ರೀರಂಗಪಟ್ಟಣ	15— 1—03	
	ಹುಣಸೂರು	ಆಂಜನೇಯಸ್ವಾಮಿ ಉತ್ಸವ	ದೊಡ್ಡ ಹೆಬ್ಬೂರು	14— 1—03	16— 1—03
	ಯಳಂದೂರು	ಸಂಕ್ರಾಂತಿ ರಥೋತ್ಸವ	ಬಿಳಿಗಿರಿ ರಂಗಸ್ವಾಮಿಯ ಬೆಟ್ಟ	14— 1—03	18— 1—03
	ಯಡತೊರೆ	ಶ್ರೀರಾಮದೇವರ ರಥೋತ್ಸವ	ಜುಂಜನಕಟ್ಟೆ	14— 1—03	13— 2—03
	ನಂಜನಗೂಡು	ಅಂಧಕಾಸುರ ಸಂಹಾರ	ನಂಜನಗೂಡು	3— 1—03	12— 1—03
		2 ಕೆಂಟೂರೋತ್ಸವ	ಡಿಟೋ	4— 1—03	12— 1—03
		3 ಪೌರ್ಣಮಿ ರಥೋತ್ಸವ	ಡಿಟೋ	13— 1—03	
ಬೆಂಗಳೂರು ...	ನೆಲಮಂಗಲ	ಶ್ರೀ ಗಂಗಾಧರೇಶ್ವರಸ್ವಾಮಿ ಸಂಕ್ರಮಣೋತ್ಸವ	ಶಿವಗಂಗೆ	12— 1—03	19— 1—03
	ದೊಡ್ಡಬಳ್ಳಾಪುರ	ಘಾಟಿ ಸುಬ್ರಹ್ಮಣ್ಯಸ್ವಾಮಿಯ ರಥೋತ್ಸವ	ಸುಬ್ರಹ್ಮಣ್ಯಘಾಟ	6— 1—03	15— 1—03

ತಾರೀಖು 31ನೇ ಡಿಸೆಂಬರ್ 1902.

ನಂ. 10504—ಲೋ. ಬೋ. (ಪಿ) 506, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ರೋಗತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವಲಾಗಾಯತು.	ಯಾವ ವರಿಗೆ.	
ರಥೋತ್ಸವ	ಕಾಳಪಟ್ಟ	ತಿರುಚೆಂಗೋಡು	ಸೇಲಂ	9— 2—03	16— 2—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡಾರ್ಸ್‌ಮೆಂಟ್ ನಂ. 2377—ಬಿ. ತಾ॥ 23—12—02.
ಅಶ್ವತ್ಥನಾರಾಯಣಸ್ವಾಮಿಯ ಉತ್ಸವ.	ಚಿನ್ನಪಪ್ಪುರು	ತಾಡಪತ್ರಿ	ಅನಂತಪುರ	2— 2—03	9— 3—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡಾರ್ಸ್‌ಮೆಂಟ್ ನಂ. 2381-ಬಿ. ತಾ॥ 23—12—02.
ವೆಂಕಟರಮಣಸ್ವಾಮಿಯ ರಥೋತ್ಸವ.	ಹಿಂದೂಪುರ ...	ಹಿಂದೂಪುರ	ಅನಂತಪುರ	3— 2—03	15— 2—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಡಾರ್ಸ್‌ಮೆಂಟ್ ನಂ. 2379-ಬಿ. ತಾ॥ 23—12—02.

ತಾರೀಖು 6ನೇ ಜನವರಿ 1903.

ನಂ. ಲೋ. ಬೋ. ಪಿ. 509, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆಗಳಿಗೂ ಮತ್ತು ಉತ್ಸವಗಳಿಗೂ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವಲಾಗಾಯತು.	ಯಾವ ವರಿವಿಗೆ.	
ರಥೋತ್ಸವ	ಮತ್ತಗೊಂಡಪಲ್ಲಿ	ಹೊಸೂರು	ಸೇಲಂ	29—1—03	17—2—03	ಆನರಬಲ್ ರೆಸಿಡೆಂಟರವರಿಗೆ ಫಸ್ಟ್ ಅಸಿಸ್ಟೆಂಟರವರ ಮೆಮೊ ನಂ. 2386, ತಾ॥ 24—12—1902. 26
ನೀಲಕಂಠೇಶ್ವರಸ್ವಾಮಿಯ ರಥೋತ್ಸವ.	ಯಮ್ಮಿಗನೂರು	ಅದೋನಿ	ಬಳ್ಳಾರಿ	1—1—03	15—1—03	ಡಿಟೋ ನಂ. 2388, ತಾ॥ 24—12—1902. 26
ತಿಮ್ಮರಾಯಸ್ವಾಮಿಯ ಉತ್ಸವ.	ಮಲ್ಲಸಂದ್ರಂ	ಹೊಸೂರು	ಸೇಲಂ	30—1—03	11—2—03	ಡಿಟೋ ನಂ. 2390, ತಾ॥ 24—12—1902. 26
ಸೋಮೇಶ್ವರಸ್ವಾಮಿಯ ಉತ್ಸವ	ಕೊತ್ತಚರುವು	ಪೆನಕೊಂಡ	ಅನಂತಪುರ	1—2—03	12—2—03	ಡಿಟೋ ನಂ. 2392, ತಾ॥ 24—12—1902. 26
ಬೆಳ್ಳಿಕೊಂಡ ರಂಗಸ್ವಾಮಿಯ ರಥೋತ್ಸವ.	ಕೊಂಡಪಾಡ	ಗುತ್ತಿ	ಡಿಟೋ	4—2—03	13—2—03	ಡಿಟೋ ನಂ. 2394, ತಾ॥ 24—12—1902. 26

ತಾರೀಖು 13ನೇ ಡಿಸೆಂಬರ 1902.

ನಂ. ಜು. 861, ಸ್ರ 1883ನೇ ಇಸವಿಯ Iನೇ ನಂಬರಿ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ನಿಂದಲೂ, 1884ನೇ ಇಸವಿಯ Iನೇ ನಂಬರಿ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನ್ನಿಂದಲೂ ಮತ್ತು 1886ನೇ ಇಸವಿಯ Iನೇ ನಂಬರ ರೆಗ್ಯುಲೇಷನ್ನಿಂದ ಮೈಸೂರು ಸೀಮೆಯಲ್ಲಿ ಜಾರೀಲಿ ಬಂದಿರುವ ಕ್ರಿಮಿನಲ್ ಪ್ರೊಸೀಜರ್ ಕೋಡಿನಿಂದಲೂ ಕೊಡಲ್ಪಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಶ್ರೀಮನ್ ಮಹಾರಾಜಾ ಸರ್ಕಾರದವರು ಇದರಡೀ ಕಂಡ ಏರ್ಪಾಡುಗಳನ್ನು 1903ನೇ ಜನವರಿ ಗು ರೈ ಲಾಗಾಯತು ಮಂಜೂರ್ಮಾಡಿರುತ್ತಾರೆ :—

(1) ಸ್ರ 1898ನೇ ಜೂ 30ನೇ ಮರ್ಕುಂ 17283—ವಿ. 4305ನೇ ನಂಬರ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಚೀಫ್ ಕೋರ್ಟಿಗೆ ಕೊಟ್ಟಿರುವ ಡಿಸ್ಟ್ರಿಕ್ಟ್ ಕೋರ್ಟಿನ ಸಾಮಾನ್ಯವಾದ ಒರಿಜಿನಲ್ ಸಿವಿಲು ಯಖ್ತ್ಯಾರಿಯೂ ಮತ್ತು ಬೆಂಗಳೂರು, ಕೋಲಾರ ವ ತುಮಕೂರು ರೆವಿನ್ಯೂ ಡಿಸ್ಟ್ರಿಕ್ಟುಗಳ ಮೇಲಣ ಸೆಷನ್ಸ್ ಕೋರ್ಟಿನ ಸಾ ಮಾನ್ಯವಾದ ಒರಿಜಿನಲ್ ಕ್ರಿಮಿನಲ್ ಯಖ್ತ್ಯಾರಿಯೂ ಚೀಫ್ ಕೋರ್ಟಿನಿಂದ ವಾಪಸು ತೆಗೆದುಕೊಳ್ಳಲ್ಪಟ್ಟಿರುತ್ತವೆ; ಮತ್ತು 1898ನೇ ಜೂ 30ನೇ ಮರ್ಕುಮಿನ ಮೇಲ್ಕಂಡ ಇಸ್ತಿಹಾರ್ನಾಮೆಯು ರದ್ದು ಮಾಡಲ್ಪಟ್ಟಿರುತ್ತದೆ.

(2) ಬೆಂಗಳೂರು, ಕೋಲಾರ ವ ತುಮಕೂರು ರೆವಿನ್ಯೂ ಡಿಸ್ಟ್ರಿಕ್ಟುಗಳ ಮೇಲಿನ ಸಿವಿಲ್ ವ ಕ್ರಿಮಿನಲ್ ಯಖ್ತ್ಯಾರಿವುಳ್ಳ ಬಂದು ಡಿಸ್ಟ್ರಿಕ್ಟು ವ ಸೆಷನ್ಸ್ ಕೋರ್ಟು ಬೆಂಗಳೂರಲ್ಲಿ ಸ್ಥಾಪಿಸಲ್ಪಡತಕ್ಕದ್ದು.

(3) ಸ್ರ 1900ನೇ ಅಕ್ಟೋಬರ್ 6ನೇ ಮರ್ಕುಂ 4930—ಜು. 507ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ ಸ್ಥಾಪಿಸ ಲ್ಪಟ್ಟ ಹಾಸನದ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜಿ ಕೋರ್ಟು ವಜಾ ಮಾಡಲ್ಪಟ್ಟಿರುತ್ತದೆ; ಮತ್ತು ಕಡೂರು ಡಿಸ್ಟ್ರಿ ಕ್ಟಿನ ಮೇಲಣ ಯಖ್ತ್ಯಾರಿಯು ಶಿವಮೊಗ್ಗಾ ಡಿವೀಜನಿಗೂ, ಹಾಸನ ರೆವಿನ್ಯೂ ಡಿಸ್ಟ್ರಿಕ್ಟಿನ ಮೇಲಣ ಯಖ್ತ್ಯಾರಿ ಯು ಮೈಸೂರು ಡಿವೀಜನಿಗೂ ವರ್ಗ ಮಾಡಲ್ಪಟ್ಟಿರುತ್ತವೆ.

(4) ಹಾಸನ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಮೇಲೆ ಚಲಾಯಿಸುವ ಬಗ್ಗೆ 10,000 ರೂಪಾಯಿಗಳ ವರಿಗಿನ ಒರಿಜಿನಲ್ ಸಿವಿಲು ಯಖ್ತ್ಯಾರಿ ವುಳ್ಳ ಸಬ್‌ಆರ್ಡಿನೇಟ್ ಜಡ್ಜಿಗಳ ಕೋರ್ಟುಗಳು ಹಾಸನ, ಚಿಕ್ಕಮಗಳೂ ರು ವ ಚಿತ್ರದುರ್ಗ ಈ ಸ್ಥಳಗಳಲ್ಲಿ ಬಂದೊಂದು ಸ್ಥಾಪಿಸಲ್ಪಡತಕ್ಕದ್ದು.

(5) ಹಾಸನ, ಚಿಕ್ಕಮಗಳೂರು ವ ಚಿತ್ರದುರ್ಗದ ಮುನ್ಸೀಫ್ ಕೋರ್ಟುಗಳು ವಜಾ ಮಾಡಲ್ಪಟ್ಟಿರುತ್ತವೆ. ಈ ಕೋ ರ್ಟುಗಳ ಸಿವಿಲು ಕೆಲಸವು 4ನೇ ಪ್ಯಾರಾದಲ್ಲಿ ಕಂಡ ಸಬ್‌ಆರ್ಡಿನೇಟ್ ಜಡ್ಜಿಗಳ ಕೋರ್ಟುಗಳಿಗೆ ವರ್ಗ ಮಾಡ ಲ್ಪಟ್ಟಿರುತ್ತೆ.

(6) ಇದರಡೀ ಕಂಡ ಸ್ಥಳಿಕ ಸರಹದ್ದುಗಳಿಂದ ಬರುವ ಮತ್ತು ಸ್ಮಾಲ್‌ಕಾಜು ಕೋರ್ಟಿನಿಂದ ಹಿಡಿಯಬಹುದಾದ 300 ರೂಪಾಯಿಗಳ ವರಿಗಿನ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಬಗ್ಗೆ ಮೇಲ್ಕಂಡ ಪ್ರತಿ ಸಬಾರ್ಡಿನೇಟ್ ಜಡ್ಜಿ ಯವರು ಸ್ಮಾಲುಕಾಜು ಕೋರ್ಟಿನ ಯಖ್ತ್ಯಾರಿಯನ್ನು ಉಂಟುಗಿ ಚಲಾಯಿಸತಕ್ಕದ್ದು.

ಹಾಸನ ಸಬ್‌ಆರ್ಡಿನೇಟ್ ಜಡ್ಜಿಯವರು—
ಹಾಸನ, ಮಂಜರಾಬಾದು, ಬೇಲೂರು ವ ಅರಸೀಕೆರೆ ತಾಲ್ಲೂಕುಗಳು.

ಚಿಕ್ಕಮಗಳೂರು ಸಬ್‌ಆರ್ಡಿನೇಟ್ ಜಡ್ಜಿಯವರು—
ಚಿಕ್ಕಮಗಳೂರು, ಕಡೂರು ವ ಮೂಡಗೆರೆ ತಾಲ್ಲೂಕುಗಳು.

ಚಿತ್ರದುರ್ಗ ಸಬ್‌ಆರ್ಡಿನೇಟ್ ಜಡ್ಜಿಯವರು—
ಹೊನ್ನಾಳಿ ಮುನ್ಸೀಫ್ ಕೋರ್ಟಿಗೆ ಸೇರಿದ ದಾವಣಗೆರೆ ತಾಲ್ಲೂಕು ವಿನಃ ಚಿತ್ರದುರ್ಗದ ವಿಸಿಷ್ಟ ರೆವಿನ್ಯೂ ಡಿಸ್ಟ್ರಿಕ್ಟು.

(7) ಮೇಲ್ಕಂಡ ಸಬ್‌ಆರ್ಡಿನೇಟ್ ಜಡ್ಜಿಗಳು ಹಾಸನ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಮೇಲಣ ಯಖ್ತ್ಯಾರಿಯೊಡನೆ ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಯವರ ಅಧಿಕಾರಗಳು ತಮ್ಮ ತಮ್ಮ ಸರಹದ್ದುಗಳಲ್ಲಿ ಉಂಟಾಗಿ ಚಲಾಯಿಸತಕ್ಕದ್ದು.

ತಾರೀಖು 13ನೇ ಡಿಸೆಂಬರ್ 1902.

ನಂ. ಜು. 864, ಸ್ರ1883ನೇ ಇಸವಿಯ Iನೇ ನಂಬರ್ ಮೈಸೂರು ಸಿವಿಲು ಕೋರ್ಟುಗಳ ರೆಗ್ಯುಲೇಷನಿನ 16ನೇ ಸೆಕ್ ಷನ್ನಿಂದ ಕೊಡಲ್ಪಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಬೆಂಗಳೂರ ಪ್ರೆಸಿಪಲ್ ಅಡೀಷನಲ್ ಮುನ್ಸೀಫರುಗಳ ಯಖ್ತ್ಯಾರಿಗೆ ವಳಪಟ್ಟ ತಾಲ್ಲೂಕುಗಳಿಂದ ಬರುವ ಮತ್ತು ಸ್ಮಾಲ್‌ಕಾಜು ಕೋರ್ಟಿನಲ್ಲಿ ಹಿಡಿಯಬಹುದಾದ 300 ರೂಪಾಯಿಗಳ ವರಿಗಿನ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಬಗ್ಗೆ ಸ್ಮಾಲ್‌ಕಾಜು ಕೋರ್ಟಿನ ಯಖ್ತ್ಯಾರಿಯನ್ನು ಬೆಂಗಳೂರ ಸಬ್ ಆರ್ಡಿನೇಟ್ ಜಡ್ಜಿ ಯವರಿಗೆ ಶ್ರೀಮನ್ ಮಹಾರಾಜಾ ಸರ್ಕಾರದವರು ಕೊಟ್ಟಿರುತ್ತಾರೆ. ಈ ಹುಕುಂ 1903ನೇ ಜನವರಿ ಗುರೈ ಲಾಗಾಯತು ಜಾರೀಲಿ ಬರತಕ್ಕದ್ದು.

ತಾರೀಖು 19ನೇ ಡಿಸೆಂಬರ್ 1902.

ನಂ. 10170–ವಿ. 1524, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ, ಮದರಾಸು ಪ್ರಾಂ ರು ಪೀಪಲ್ಸ್ ಪಾರ್ಕಿನಲ್ಲಿ ನಡೆಯುವ ಕ್ರಿಸ್ತಮಸ್ ಜಾತ್ರೆಗೆ ಮೈಸೂರು ಸಂಸ್ಥಾನದಿಂದ 1902ನೇ ಡಿಸೆಂಬರ್ 20ರ ಲಾಗಾಯತು 31ರ ನರಿವಿಗೆ ಜನಗಳು ಬರುವದನ್ನು ಅಡ್ಡೀಪಡಿಸುವ ಬಗ್ಗೆ ಮದರಾಸು ಗವರ್ನ್‌ಮೆಂಟಿನವರು ಹುಕುಂ ಮಾಡಿರುತ್ತಾರೆ.

ತಾರೀಖು 20ನೇ ಡಿಸೆಂಬರ್ 1902.

ನಂ. 10192—ಮಿ. 1529, ಸಬ್ ಅಸಿಸ್ಟೆಂಟ್ ಸರ್ಜರಾದ ಮೆ॥ ಟಿ. ಎಸ್. ಸಿದ್ದಪ್ಪನವರಿಗೆ 1902ನೇ ನವಂಬರ್ 19ನೇ ಮುಕ್ತಂ 8633—ಮಿ. 1234ನೇ ನಂಬರ್ ಗವರ್ನ್‌ಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿರುವ 2 ತಿಂಗಳುಗಳ ಪ್ರಿವಿಲೇಜ್ ರಜಾ ಇನ್ನೂ 1 ತಿಂಗಳು ಇದರಿಂದ ಜಾಸ್ತಿ ಮಾಡಲ್ಪಟ್ಟು ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ ಒಟ್ಟು 3 ತಿಂಗಳುಗಳ ಪ್ರಿವಿಲೇಜ್ ರಜಾವಾಗಿರುತ್ತದೆ.

ತಾರೀಖು 23ನೇ ಡಿಸೆಂಬರ್ 1902.

ನಂ. ಜು. 917, ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಸಬ್ ಪ್ರೋಟೆಂ ಆಕ್ಟಿಂಗು ಡೆಪ್ಯುಟಿ ಅನುಲ್ಲಾರ್ರಾದ ಗುಲಾಂಮಹಮದ್ ಮೆಕ್ಕೈ ಯವರು ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಡಿಸೆಂಬರ್ 1902.

ನಂ. 10354—ಲೋ. ಫಂ. 161—92, ವರ್ಗಾಯಿಸಲ್ಪಟ್ಟದ್ದರಿಂದ ಸ್ಥಳವನ್ನು ಬಿಟ್ಟ ಮೆ॥ ಲಾಂಗ್ಲೆ ಯವರಿಗೆ ಬದಲಾಗಿ ದಾವಣಗೆರೆಯಲ್ಲಿರುವ ಮಿಸ್ಸರ್ಸ್ ಬಿಸ್ಸಿ ಅಂಡ್‌ಕೊ ಯವರ ಏಜಂಟರಾದ ಮೆ॥ ಎಫ್. ವಿ. ರೊಜೇರಿಯಾ ಯವರು ದಾವಣಗೆರೆ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಡಿಸೆಂಬರ್ 1902.

ನಂ. 10401—ಎಜ್ಯು. 248, ಮೈಸೂರಲ್ಲಿರುವ ಮಹಾರಾಜಾ ಕಾಲೇಜಿನ ಚರಿತ್ರೆಯ ಆಕ್ಟಿಂಗ್ ಪಂಡಿತರಾದ ಡಾಕ್ಟರ್ ನಿಷ್ಕಿಂಚಜಪ್ಪಭಟ್ಟೋಪಾಧ್ಯಾಯರವರಿಗೆ 1902ನೇ ಅಕ್ಟೋಬರ್ 20ರ ಲಾಗಾಯತು ನವಂಬರ್ 9ನ ವರಿವಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾ ಕೊಡಲ್ಪಟ್ಟಿತ್ತು.

ತಾರೀಖು 25ನೇ ಡಿಸೆಂಬರ್ 1902.

ನಂ. 233—ಎಕ್ಸೈ. ಫೈ. 22—96, ಎಕ್ಸೈಜ್ ಇಲಾಖೆಯ ಅಸಿಸ್ಟೆಂಟ್ ಕಮಿಷನರಾದ ಮೆ॥ ಟಿ. ಎಸ್. ಮಿರ್ ನಿಜಾಮುದ್ದೀನ್ ಅಲಿಖಾನ್ ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 172ನೇ ಹಳೇ ಆರ್ಟಿಕಲ್ ಅನುಸರಿಸಿ 1901ನೇ ಸೆಪ್ಟಂಬರ್ 26ನೇ ಮುಕ್ತಂ 5136 ಎಕ್ಸೈ. ಫೈ. 22—96ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 15 ದಿನಗಳ ಕ್ಯಾಜುಯಲ್ ರಜಾವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವೆಂದು ರಿಪೋರ್ಟು ಮಾಡಿರುವದ್ದರಿಂದ ಸದರೀ ರಜಾ ಇದರಿಂದ ರದ್ದುಮಾಡಲ್ಪಟ್ಟಿರುತ್ತದೆ.

ತಾರೀಖು 3ನೇ ಜನವರಿ 1903.

ನಂ. ಜು. 991, ಕೋರ್ಟುಗಳು ಪುನಃ ತೆಗೆಯಲ್ಪಡುವ 1903ನೇ ಜನವರಿ 9ನೇ ತಾರೀಖಿನಾರಭ್ಯ ಜಾರೀಲಿ ಬರುವ ಬಗ್ಗೆ ಇದರಡಿ ಕಂಡ ಮೊಕರರಾತಿಗಳು, ನೇಮಣೂಕಿಗಳು ಮತ್ತು ವರ್ಗಾವರ್ಗಿಗಳು ಮಂಜೂರ್ಮಾಡಲ್ಪಟ್ಟಿರುತ್ತವೆ :—

1. ಅಸಿಸ್ಟೆಂಟ್ ಕಮಿಷನರ್ ಮೆ॥ ಟಿ. ಪರಮಶಿವ ಅಯ್ಯರ್, ಬಿ. ಎ., ಯವರು, ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆ॥ ಸಿ. ಬಿ. ಶೇಷಗಿರಿರಾಯರು ಮತ್ತು ಪೊಲೀಸು ಇಲಾಖೆಯಲ್ಲಿ ಕೆಲಸ ನೋಡುತಲಿರುವ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆ॥ ಮಿರ್ ಹಂಜಾಹುಸೇನ್, ಬಿ. ಎ., ಬಿ. ಎಲ್., ಯವರು ಸಬಾರ್ಡಿನೆಟ್ ಜಡ್ಜಿಗಳಾಗಿ ಮೊಕರರ್ರಾಡಲ್ಪಟ್ಟು, 1902ನೇ ಡಿಸೆಂಬರ್ 13ನೇ ಮುಕ್ತಂ ಜು. 861ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ ಚಿಕ್ಕಮಗಳೂರು, ಹಾಸನ ಮತ್ತು ಚಿತ್ರದುರ್ಗ ಸ್ಥಳಗಳಲ್ಲಿ ಸ್ಥಾಪಿಸಲ್ಪಡುವ ಸಬಾರ್ಡಿನೇಟ್ ಜಡ್ಜಿಯರ ಕೋರ್ಟುಗಳ ಚಾರ್ಜ್ಗೋಸ್ಕರ ಕ್ರಮವಾಗಿ ಆಯಾ ಸ್ಥಳಗಳಿಗೆ ನೇಮಿಸಲ್ಪಟ್ಟಿರುತ್ತಾರೆ.

2. ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯವರಾದ ಮೆ॥ ಎಸ್. ಆರ್. ಸುಬ್ಬರಾಮು ಅಯ್ಯರ್, ಬಿ. ಎ., ಯವರು ನಂದಿದುರ್ಗ ಡಿವೀಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟು ಚಾರ್ಜ್ಗೋಸ್ಕರ ಬೆಂಗಳೂರಿಗೆ ನೇಮಿಸಲ್ಪಟ್ಟಿರುತ್ತಾರೆ.

3. ಇದರಡಿ ಕಂಡ ಮುನ್ಸೀಫರುಗಳು ಅವರವರ ಹೆಸರುಗಳ ಎದುರಾಗಿ ನಮೂದಿಸಿರುವ ಸ್ಥಳಗಳಿಗೆ ವರ್ಗಮಾಡಲ್ಪಟ್ಟಿರುತ್ತಾರೆ :—

ಕೆಲಸದಿಂದ ನಿವೃತ್ತರಾದ ಮೆ॥ ಬಿ. ಶ್ರೀನಿವಾಸರಾಯರಿಗೆ ಬದಲಾಗಿ ಮೆ॥ ಆನಂದರಾವ್ ಶಿರಸಿ, ಬಿ. ಎ., ಎಲ್. ಎಲ್. ಬಿ., ಯವರು ಚಿಕ್ಕಮಗಳೂರಿಂದ ಮೈಸೂರಿಗೆ.

ಮೆ॥ ವಿ. ರಂಗಾಚಾರ್ಯರಿಗೆ ಬದಲಾಗಿ ಮೆ॥ ಕೆ. ಮೈಲಾರಿರಾವ್, ಬಿ. ಎ., ಬಿ. ಎಲ್., ಯವರು ಹೊಳೇನರಸೀಪುರದಿಂದ ಬೆಂಗಳೂರಿಗೆ.

ಮೆ॥ ಮೈಲಾರರಾಯರಿಗೆ ಬದಲಾಗಿ ಮೆ॥ ಎಂ. ಎಸ್. ಶ್ರೀಕಂಠೇಶಗೌಡ, ಬಿ. ಎ., ಬಿ. ಎಲ್., ಯವರು ಚಿತ್ರದುರ್ಗದಿಂದ ಹೊಳೇನರಸೀಪುರಕ್ಕೆ.

4. ಮುನ್ಸಿಫ್ ಮೆ॥ ವಿ. ರಂಗಾಚಾರಿ, ಬಿ. ಎ., ಬಿ. ಎಲ್., ಯವರು ಕಡೇದರ್ಜೆಯ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ರಾಡಲ್ಪಟ್ಟು, ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜ್ಗೋಸ್ಕರ ಮೈಸೂರಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 1ನೇ ಡಿಸೆಂಬರ್ 1902.

ನಂ. ರೆ. 2456, ಸನ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ನಿವೇಶನಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೂಡಗೆರೆಯಲ್ಲಿ ದಂಡು ಇಳಿಕೊಳ್ಳುವಸ್ಥಳಕ್ಕೋಸ್ಕರ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ನಿವೇಶನಗಳು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂಬರು.	ಬೇಕಾಗಿರುವ ಜಮೀನಿನ ವಿವರ.	ವಿಸ್ತೀರ್ಣ.	ಜಕ್ಕುಬಂದಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.	ಪರಿಹಾರವಾಗಿ ಕೊಡಬೇಕಾದ ಮೊಬಲಗು. ರೂ.	ಆ.	ಪೈ.
ಕಡೂರು.	ಮೂಡಗೆರೆ	ಮೂಡಗೆರೆ	1. ಅರೆಹಳ್ಳಿ ಬಾಪುಸಾಬಿ.	157	ಖಾಲಿ ನಿವೇಶನ ನಂ. 26	615 ಚದರ ಗಜಗಳು	27ನೇ ನಂಬರ್ ನಿವೇಶನ	157ನೇ ಸರ್ವೆ ನಂಬರಿನ ಸರ್ಕಾರ ಜಮೀನು	ಕುಂದೂರು ರಸ್ತೆ	25ನೇ ನಂಬರ್ ನಿವೇಶನ	7	0	0
			2. ಗಂಗವಕ್ಕಿ ಹುಸೇನ್ ಸಾಬಿಯ ಹೆಂಡತಿ ಫಾತ್ಮಾಬಿ.	ಡಿಟೋ	ಡಿಟೋ ನಂ. 25 ಮತ್ತು ಹುಲ್ಲಿನ ಗುಡಿಸಲು	450 ಡಿಟೋ	25ನೇ ನಂಬರ್ ನಿವೇಶನ	ಡಿಟೋ	26ನೇ ನಂಬರ್ ನಿವೇಶನ	24ನೇ ನಂಬರ್ ನಿವೇಶನ	21	12	0
			3. ಸಣ್ಣಹಬೀಬ್ ಸಾಬಿಯು ಸಹೋದರ ರಸೂಲ್‌ಸಾಬಿ.	ಡಿಟೋ	ಡಿಟೋ ನಂ. 24 ಮತ್ತು ಹುಲ್ಲಿನ ಗುಡಿಸಲು	450 ಡಿಟೋ	29ನೇ ನಂಬರ್ ನಿವೇಶನ	ಡಿಟೋ	25ನೇ ನಂಬರ್ ನಿವೇಶನ	25ನೇ ನಂಬರ್ ನಿವೇಶನ	40	0	0
			4. ಕುಂದೂರು ನಂಜಮ್ಮ	ಡಿಟೋ	ಡಿಟೋ ನಂ. 31 ಮತ್ತು ಹೆಂಚಿನ ಮನೆ	312 ಡಿಟೋ	ರಸ್ತೆಗೋಸ್ಕರ ಬಿಟ್ಟ ಸರ್ಕಾರ ಜಮೀನು	22ನೇ ನಂಬರಿ ನಿವೇಶನ	30ನೇ ನಂಬರ್ ನಿವೇಶನ	32ನೇ ನಂಬರ್ ನಿವೇಶನ	217	2	0
			5. ಗಯಾಸುದ್ದೀನ್‌ಸಾಬ್.	ಡಿಟೋ	ಡಿಟೋ ನಂ. 54 ಮತ್ತು ಹುಲ್ಲಿನ ಗುಡಿಸಲು	930 ಡಿಟೋ	65ನೇ ನಂಬರ್ ನಿವೇಶನ	ಸರ್ಕಾರ ಬಂಜರ್	55ನೇ ನಂಬರ್ ನಿವೇಶನ	53ನೇ ನಂಬರ್ ನಿವೇಶನ	50	8	0
			6. ಯೂಸೂಫ್‌ಅಲ್ಲಿಯು ಸಹೋದರ ಹಯಾತ್‌ಸಾಬಿ.	ಡಿಟೋ	ಖಾಲಿ ನಿವೇಶನ ನಂ. 51	720 ಡಿಟೋ	68ನೇ ನಂಬರ್ ನಿವೇಶನ	ಡಿಟೋ	52ನೇ ನಂಬರ್ ನಿವೇಶನ	50ನೇ ನಂಬರ್ ನಿವೇಶನ	7	0	0
			7. ಮಹಮದ್‌ಅಲ್ಲಿಸಾಬಿ ಬಿನ್ ಫಕೀರ್‌ಬೀರಿ.	158	ಖಾಲಿ ನಿವೇಶನ ನಂ. 11	450 ಡಿಟೋ	47ನೇ ನಂಬರ್ ನಿವೇಶನ	ಡಿಟೋ	12ನೇ ನಂಬರ್ ನಿವೇಶನ	158ನೇ ಸರ್ವೆ ನಂಬರಿನ ಸರ್ಕಾರ ಜಮೀನು	7	0	0
										ಜುಮ್ಲಾ	350	6	0

ತಾರೀಖು 20ನೇ ನವೆಂಬರ್ 1902.

ನಂ. ರೆ. 2273, ಸನ್ 1894ನೇ ಇಸವಿಯ VIIನೇ ನಂಬರ್ ಮೈಸೂರು ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇವರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಚಾಮರಾಜೇಂದ್ರ ರಿಜರ್ವಾಯಿರಿನ ರಕ್ಷಣಾರ್ಥವಾಗಿ ಬೇಕಾಗಿರುತ್ತವೆ ಮತ್ತು ಎಕ್ಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್., ಯವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ವಿಶೇಷತಃ ಅಧಿಕಾರ ಕೊಡಲ್ಪಟ್ಟಿರುತ್ತಾರ: —

ಹಂಡರ್ ನಂಬರ್.	ಸರ್ವೆ ನಂಬರ್ ಖಾನೇಷುಮಾರಿ.	ತಾಲ್ಲೂಕು.	ಗ್ರಾಮ.	ಮೂಲೀಕರ ಹೆಸರು.	ವಿಸ್ತೀರ್ಣ ಚದರ ಗಜಗಳು.	
					ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.
1	29			ಹನುಮಂತ ಬಿ॥ ಸೊಂಣ	10	$8\frac{1}{2}$
2	26			ವೋಬಕ್ಕನ ನಂಜಿ	11	$8\frac{1}{2}$
3	30			ಸೀನಪ್ಪ	11	$6\frac{1}{4}$
4	25			ಚನ್ನನಂಜಯ್ಯ	11	$10\frac{1}{2}$
5	23			ರಾಘಂಣ	11	$12\frac{1}{4}$
6	17			ಹುಚ್ಚವೀರಪ್ಪ	$11\frac{1}{2}$	$11\frac{1}{2}$
7	65			ದೊಡ್ಡಂಣನ ಸುಬ್ಬ	19	10
8	164			ದೊಡ್ಡಂಣನ ಸುಬ್ಬ	31	$18\frac{1}{2}$
9	163			ತಿಲ್ಲಕ್ಕಿ	$22\frac{1}{4}$	20
10	162			ಬೀದಿಮನೆ ಬೈರ ..	$20\frac{1}{4}$	$5\frac{1}{2}$
11	160			ದೊಡ್ಡ ಚನ್ನರಾಯನ ಹನುಮಂತ ..	31	$8\frac{1}{2}$
12	161			ಹನುಮಂತ ಬಿ॥ ನಂಜುಂಡ	20	$23\frac{1}{2}$
13	166			ಮುನಿಯ ಬಿ॥ ಕೆಂಚ	13	15
14	69			ಐಯಂಣ	21	10
15	59			ಮುನಿಯ ಬಿ॥ ಮಾರ	10	$20\frac{1}{4}$
16	58			ಲಿಂಗನಾಯಿಕ	21	$26\frac{1}{4}$
17	54			ಸೀನಪ್ಪ	10	$6\frac{1}{2}$
18	52			ಅರಲಿಂಗ	14	27
19	167	ದೊಡ್ಡಬಳ್ಳಾಪುರ	ಬ್ಯಾಲ್ಯ	ರಾಘಂಣ	26	$13\frac{1}{2}$
20	47			ಯಲ್ಲಗ	25	$11\frac{1}{2}$
21	116			ಸೀನಪ್ಪ	$16\frac{1}{2}$	11
22	21			ಹಜಾಂಮುದ್ದ	21	15
23	164			ಅರಲಿಂಗ	20	13
24	22			ನಂಜುಂಡ ಬಿ॥ ಚಿಕ್ಕ	12	10
25	170			ಕಕ್ಕೆಹಳ್ಳಿ ನಂಜುಂಡ	18	18
26	175			ಸಂದಿ ವೆಂಕಟರಮಣ	12	16
27	78			ಜಾಲದಾರ್ಗಿ	12	10
28	79			ಡಿಟೋ	18	24
29	81			ದೊಡ್ಡ ಬಿ॥ ಮಾರ	5	$11\frac{1}{2}$
				ಹನುಮಂತ	19	15
30	121			ಹಲಸೂರು ಮಾಲಯ್ಯ	11	11
31	66			ಬೆಸ್ತೂರು ನಾರಾಯಣ	13	7
32	60			ನರಸಿಮ್ಮ ಬಿ॥ ನಂಜೆಗೌಡ	22	22
33	172			ಕೃಷ್ಣ	$2\frac{1}{2}$	6
34	173			ಅಂದಿಯಪ್ಪ	$2\frac{1}{2}$	6
35	174			ಕೋನಪ್ಪ	$2\frac{1}{2}$	6
36	93			ದಂಡೆರಮಾರ	10	10
37	107			ವೆಂಕಟ	7	6
38	96			ತಲಕಾಯಿ ಹನುಮ ಕ್ರಯದಾರ ಸೀನಪ್ಪ ..	5	5
39	114			ಮಾರ ಹನುಮ	13	25

ತಾರೀಖು 20ನೇ ನವಂಬರ್ 1902.

ನಂ. ರೆ. 2272, ಸ॥ 1894ನೇ ಇಸವಿಯ VIIನೇ ನಂಬರ್ ಮೈಸೂರು ಲ್ಯಾಂಡ್ ಅಸೈನ್‌ಮೆಂಟ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸಾರ್ವಕಾರ ಕೆಲಸಕ್ಕೆ ಅಂದರೆ, ಚಾಮರಾಜೇಂದ್ರ ರಿಜರ್ವಾಯಿರಿನ ರಕ್ಷಣಾರ್ಥವಾಗಿ ಬೇಕಾಗಿರುತ್ತವೆ. ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್, ಯವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ವಿಶೇಷತಃ ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಪಾರ್ಸಲ್ ನಂ.	ಖಾನೇಷುಮಾರಿ ನಂ.	ತಾಲ್ಲೂಕು.	ಗ್ರಾಮ.	ಮಾಲೀಕರ ಹೆಸರು.	ವಿಸ್ತೀರ್ಣ ಗಜಗಳು.	
					ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.
1	7	ಚಿಕ್ಕಬಳ್ಳಾಪುರ.	ಕಾಕೊಳು.	ಲಿಂಗಮ್ಮ	4	12
2	11			ಗೌರಮ್ಮ	10	5
3	16			ಚಿಕ್ಕೆಗೌಡ	7	16
4	17			ನರಸಿಂಣ	18	5
5	24			ಮಲ್ಲ	12	12
6	33			ನರಸಂಣ	12	12
7	34			ಬಾಲಪ್ಪಯ್ಯ	30	70
8	60			ನರಿಮೂರ	16	6
9	63			ಬುಡ್ಡ	12	5
10	72			ನರಸಂಣ	20	10
11	93			ವೈದ್ಯ ವೆಂಕಾಪಂಡಿತರು ಮತ್ತು 3 ಜನ ಇತರರು ...	22	22
12	109ಎ			ನರಸಂಣ	165	25
	113					
13	110			ನಾಗ	12	18
14	111			ನರಸಂಣ	32	14
15	112			ನಂಜಪ್ಪ ಮತ್ತು ಗೌರಮ್ಮ ಜಂಟಿ	20	23

ತಾರೀಖು 22ನೇ ಡಿಸೆಂಬರ್ 1902.

ನಂ. ರೆ. 2737, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಾದ ಮೆ॥ ಎಫ್. ಇ. ಸಿ. ಕಾರ್ ಯವರಿಗೆ 1903ನೇ ಜನವರಿ 9ನೇ ತಾರೀಖಿನಾರಭ್ಯ ಮತ್ತು ಕ್ರಿಸ್ತಮಸ್ ಮತ್ತು ಪಟ್ಟಣ ಭಿಷೇಕೋತ್ಸವದ ರಜಾ ದಿನಗಳೊಡನೆ ಐದು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಚಿಕ್ಕಬಳ್ಳಾಪುರದ ಸಬ್ ಡಿವೀಜ್ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಸೈಯದ್ ಹಮೀದ್ ಹುಸೇನ್ ಯವರು, ಮೆ॥ ಕಾರ್ ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗು ತರೀಕು ನೊಕರರ್ಯಾಡಲ್ಪಟ್ಟಿರುತ್ತಾರೆ.

ತಾರೀಖು 23ನೇ ಡಿಸೆಂಬರ್ 1902.

ನಂ. ರೆ. 2744—ರೆ. ಫೈ. 121–96, ಮೈಸೂರು ಡಿಸ್ಟ್ರಿಕ್ಟಿನ ಆಫೀಷಿಯಟಿಂಗ್ ಡೆಪ್ಯುಟಿ ಕಮೀಷನರಾದ ಮೆ॥ ಎಚ್. ರಾಮಾನುಜಯ್ಯಂಗಾರ್ಯರಿಗೆ 1902ನೇ ಅಕ್ಟೋಬರ್ 28ನೇ ಮಾರ್ಕ್ಕಂ ರೆ. 1820—ರೆ. ಫೈ. 121–96ನೇ ನಂಬರ್ ಗವರ್ನ್ಮೆಂಟಿನ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 2 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ತಾರೀಖು 23ನೇ ಡಿಸೆಂಬರ್ 1902.

ನಂ. ರೆ. 2750–ರೆ ಫೈ. 42–1901, ಪ್ರೊಬೇಷನರಿ ಅಸಿಸ್ಟೆಂಟ್ ರಸಾಯನ ಶಾಸ್ತ್ರಜ್ಞರಾದ ಮೆ॥ ಎ. ಕೆ. ಯಜ್ಞನಾರಾಯಣ ಅಯ್ಯರ್‌ಯವರಿಗೆ 1902ನೇ ಅಕ್ಟೋಬರ್ 13ನೇ ಮಾರ್ಕ್ಕಂ 1848—ರೆ. ಫೈ. 42–1901ನೇ ನಂಬರ್ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ ತಲಬಿಲ್ಲದ 1 ತಿಂಗಳು 22 ದಿನಗಳ ಎಕ್‌ಸ್ಟ್ರಾ ಆರ್ಡಿನರಿ ರಜಾ ಇನ್ನೂ 2 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಎಲ್. ಅನಂತಸ್ವಾಮಿರಾವ್,

ಫಾರ್ ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನ್‌ಮೆಂಟ್ ಸೆಕ್ರಿಟರಿ.

ಫಾರೆಸ್ಟ್.

ಇಸ್ತಿಹಾರ್ನ್ಮೆ ಮಾ.

ತಾರೀಖು 22ನೇ ಡಿಸೆಂಬರ್ 1902.

ನಂ. 421—3483, ಕಡೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್ವೇಟರಾದ ಮೆ॥ ಎಂ. ಜಿ. ರಾಮರಾಯರಿಗೆ 1902ನೇ ಡಿಸೆಂಬರ್ 9ನೇ ಮಾರ್ಕ್ಕಂ 399–3147ನೇ ನಂಬರ್ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ $1\frac{1}{2}$ ತಿಂಗಳುಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಆಫೀಷಿಯೇಟಿಂಗ್ ಸೆಕ್ರಿಟರಿ.